**ಡಿ.ಡಬ್ಲ್ಯೂ ಃ 1**

**ಸಾಕ್ಷಿಗೆ ದಿನಾಂಕಃ 06.03.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 1ನೇ ಎದರುದಾರರ ಪರಃ ಶ್ರೀ ವಕೀಲರ ಮೂಲಕ ಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಚಾಲನಾ ಪರವಾನಿಗೆಯ ನೋಟರಿಕೃತ ಪ್ರತಿಯನ್ನು ನಿ.ಆರ್ **1** ಎಂದು, ಎರಡು ಅರ್,ಸಿ, ಪುಸ್ತಕಗಳ ನೋಟರಿಕೃತ ಪ್ರತಿಗಳನ್ನು ನಿ.ಆರ್ **2** ಮತ್ತು **3** ಎಂದು, ವಿಮೆಯ ಪ್ರತಿಯನ್ನು ನಿಅರ್ **-4** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ವಕಿಲರಿಂದ**

ನಮ್ಮ ಟ್ರಾಕ್ಟರ್ ಮತ್ತು ಟ್ರೇಲರ್ ಗೆ ಅಪಘಾತವಾಗಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ಕೆಎ-**35**-ಟಿಬಿ-**2008** ಇದು ಟ್ರೇಲರ್ ಗೆ ಸಂಬಂಧಿಸಿದ ನೊಂದಣಿ ಸಂಖ್ಯೆ ಅಗಿರುತ್ತೆದೆ. ಕೆಎ-**35**-ಟಿಎ-**8418** ಇದು ಇಂಜಿನಿಗ್ ಸಂಬಂಧಿಸಿದ ನೊಂದಣಿ ಸಂಖ್ಯೆ ಅಗಿರುತ್ತದೆ. ಸರಿದ ಟ್ರಾಕ್ಟರ್ ಮತ್ತು ಇಂಜಿನ್ ನ ಚಾಲಕನಾಗಿ ಶಿವರಾಜು ಎಂಬುವವರು ನೇಮಕವಾಗಿದ್ದರು ಎಂದರೆ ಸರಿ. ಶಿವರಾಜು ತಪ್ಪಿ ನಿಂದ ಅಪಘಾತವಾಗಿದೆ ಎಂದು ಪೋಲೀಸರು ನನ್ನ ಮತ್ತು ಶಿವರಾಜು ರವರ ವಿರುದ್ದ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಲ್ಲಿಸಿದ್ದು ಅದು ಸುಳ್ಳಾಗಿರುತ್ತದೆ. ಸದರಿ ಪ್ರಕರಣದಲ್ಲಿ ನಾನು ಮತ್ತು ಶಿವರಾಜು ಹಾಜರಾಗುತ್ತಿದ್ದೇವೆ ಎಂದರೆ ಸರಿ.

**2)** ಸದರಿ ಚಾಲಕ ಶಿವರಾಜು ರವರಿಗೆ ಚಾಲನೆ ಪರವಾನಿಗೆ ಇರುತ್ತದೆ ಎಂದರೆ ಸರಿ. ಅಪಘಾತ ಕಾಲಕ್ಕೆ ಟ್ರಾಕ್ಟರ್ ಇಂಜಿನ್ ಮತ್ತು ಟ್ರೇಲರ್ ಗೆ ವಿಮೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಚಾಲಕನ ತಪ್ಪಿ ನಿಂದ ಅಪಘಾತವಾಗಿರುವುದರಿಂದ ನಾನು ಮತ್ತು ವಿಮೆ ಕಂಪನಿ ಅರ್ಜಿದಾರರಿಗೆ ಪರಿಹಾರ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ಸಾದ್ಯವಾದರೆ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.